ಲೇಖಕರು ಅತ್ಯಂತ ಧೈರ್ಯದಿಂದ ಮೌಲ್ಯಗಳಿಗಾಗಿ ಹೋರಾಡಬೇಕು ಎಂದು ಹೇಳುತ್ತಿದ್ದಾರೆ. ಆದರೆ ನಾವು ಕೇವಲ ಕತೆ ಹೇಳುವುದು ನಮ್ಮ ಧರ್ಮ ಅಂದುಕೊಂಡಿದ್ದೇವೆ. ನಾನು ಈಗ ಕ್ಯಾಥಲಿಕ್ ಆಗಿದ್ದು, ಹಿಂದೂ ಪಾತ್ರವೊಂದನ್ನು ಸೃಷ್ಟಿಸುತ್ತಿದ್ದೇನೆಂದರೆ ಯಾರೋ ಹಿಂದೆ ನಿಂತು ಗಮನಿಸುತ್ತಿದ್ದಾರೆ ಅನ್ನಿಸುತ್ತೆ. 'ಏನು ಬರೀತಾ ಇದೀಯಾ?' ಅಂತ ಜಬರಿಸಿದಂತೆ ಆದಾಗ ನಾನೇ ನನ್ನ ಕತೆಗೆ ಕತ್ತರಿ ಆಡಿಸುವ ಸೆನ್ಸಾರ್ ಮಂಡಳಿಯವನಾಗಿ ಬಿಡುತ್ತೇನೆ. ಬೆದರಿಕೆ ಬರುತ್ತಿರುವುದು ಅವರಿಂದಲ್ಲ, ನನ್ನೊಳಗಿಂದ ಅನ್ನಿಸುತ್ತೆ.

ಬ್ಯಾನ್ ಮಾಡುವ ಶಕ್ತಿ ಪಡೆದಿದ್ದವು. ಯಾವುದು ಬರೆಯಬೇಕು, ಯಾವುದು ಬರೆಯಬಾರದು ಎಂದು ಅವುಗಳು ನಿರ್ದೇಶಿಸುತ್ತಿದ್ದವು. ನಮ್ಮ ಕಲ್ಪನೆ ಮತ್ತು ಸೃಜನಶೀಲತೆ ತಡೆಯುವ ಹಗೆಗಳು ಎಲ್ಲಾ ಕಾಲಕ್ಕೂ ಇರುತ್ತವೆ. ಆದ್ದರಿಂದ ಸ್ವಂತ ಸೆನ್ಸಾರ್‌ಶಿಪ್ ಎಂಬುದು ಸಾಹಿತಿಗಳ ಎಲ್ಲಾ ಕಾಲದ ದೊಡ್ಡ ಸವಾಲು. ಇದು ಕೇವಲ ಭಾರತಕ್ಕೆ ಸೀಮಿತವಾದದ್ದಲ್ಲ. ಡಿ.ಹೆಚ್. ಲಾರೆನ್ಸ್ ಕಾಲಕ್ಕೂ ಅವನು ಎದುರಿಸಿದ್ದಾನೆ. ಅವನ ಪುಸ್ತಕವನ್ನೂ ಬ್ಯಾನ್ ಮಾಡಲಾಗಿದೆ. ಈಗ ಲಾರೆನ್ಸ್ ಪುಸ್ತಕವನ್ನು ಕ್ಲಾಸಿಕ್ ಅಂತ ಪರಿಗಣಿಸುತ್ತೇವೆ.

**◆ ಒಂದು ವೈಯಕ್ತಿಕ ಪ್ರಶ್ನೆ ಕೇಳುತ್ತೇನೆ. ನೀವು ಕ್ಯಾಥೋಲಿಕ್ ಕ್ರಿಶ್ಚಿಯನ್ ಆಗಿರುವ ಕಾರಣದಿಂದಲೇ, ಒಬ್ಬ ಹಿಂದೂ ಲೇಖಕನಿಗೆ ಸಿಕ್ಕಷ್ಟು ವಿಪುಲ ಅವಕಾಶಗಳು ನಿಮಗೆ ಈ ದೇಶದಲ್ಲಿ ಸಿಗಲಿಲ್ಲ ಎಂದು ಅನ್ನಿಸುತ್ತದೆಯಾ?**

ಇಲ್ಲ. ನನಗೆ ಯಾವತ್ತೂ... ಒಂದು ವಿಷಯ ಹೇಳ್ತೀನಿ. ನಾವು ಚಿಕ್ಕವರಿರುವಾಗ 'ಆಗಿದ್ದರೆ...' ಎನ್ನುವ ಮನಸ್ಸಿನ ಆಟ ಆಡುತ್ತಲೇ ಇರುತ್ತೇವೆ. 'ನಮ್ಮ ಅಪ್ಪ-ಅಮ್ಮ ಸಿಕ್ಕಾಪಟ್ಟೆ ಶ್ರೀಮಂತರಾಗಿದ್ದರೆ...', 'ಅಂತಹ ದೊಡ್ಡ ಮನೆಯಲ್ಲಿ ನಾನು ಹುಟ್ಟಿದ್ದರೆ...', 'ಅಷ್ಟೊಳ್ಳೆ ಕಾರಿನಲ್ಲಿ ನಾನು ಶಾಲೆಗೆ ಬರುವಂತಿದ್ದರೆ...' ಎಂದೆಲ್ಲಾ ಮನಸ್ಸಿನಲ್ಲಿ ಆಟವಾಡುತ್ತೇವೆ. ಆದರೆ ನಿಧಾನಕ್ಕೆ ನಮ್ಮ ಸಂತೋಷವು ನಮ್ಮ ವ್ಯಕ್ತಿತ್ವದ ಮೇಲೆ ಅವಲಂಬಿತವಾಗಿದೆ ಎಂದು ಅರಿವಾಗುತ್ತದೆ. ಈ ಆಟ ಆಡಲೇನೋ ಚಂದ. ಈವತ್ತೂ ನಾನು ವಿಮಾನದಲ್ಲಿ ಬರುವಾಗ 'ಬಿಜಿನೆಸ್ ಕ್ಲಾಸಿನಲ್ಲಿ ಬರುವಂತಿದ್ದರೆ...', ಹೋಟೆಲಿನಲ್ ನೋಂದಣಿ ಮಾಡಿಸುವಾಗ 'ಸಪ್ತತಾರಾ ಹೋಟೆಲಿನಲ್ಲಿ ಉಳಿಸಿದ್ದರೆ...', ನನ್ನ ಮುಂದೆ ಹತ್ತಾರು ಮಹತ್ವದ ಲೇಖಕರನ್ನು ಕಂಡಾಗ 'ಅವರಂತೆ ನಾನಾಗಿದ್ದರೆ...' ಹೀಗೆಲ್ಲಾ ಅನ್ನಿಸುತ್ತೆ. ಚಿಕ್ಕಂದಿನಲ್ಲಿ ಗಂಟೆಗಟ್ಟಲೆ ಈ ಆಟ ಆಡುತ್ತಿದ್ದೆ. ಈಗ ಹತ್ತು ಸೆಕೆಂಡ್ ಆಡುವಷ್ಟರಲ್ಲಿ ಜಾಗೃತಗೊಂಡು ಅದರಿಂದ ಹೊರಬರುತ್ತೇನೆ. ಅದರ ಬದಲು 'ಜೆರ್ರಿ, ಸುಮ್ಮನೆ ಕೂತು ಬರಿ. ಬೇರೆಯವನೊಬ್ಬ ನಿನ್ನನ್ನ ನೋಡಿ ತಾನು ಜೆರ್ರಿ ಪಿಂಟೋ ಆಗಿದ್ದರೆ... ಅಂತ ಮನಸಿನಾಟ ಆಡುತ್ತಿರುತ್ತಾನೆ' ಅಂತ ಹೇಳಿಕೊಳ್ಳುತ್ತೇನೆ. ಇದು ಒಂದು ರೀತಿ ನನ್ನನ್ನು ನಾನು ರಕ್ಷಿಸಿಕೊಳ್ಳುವ ಕ್ರಮ. ನಮಗೆ ತಪ್ಪಿದ ಲಕ್ಷಾಂತರ ಅವಕಾಶಗಳ ಒಳ್ಳೆಯ ಅಂಶ ಎಂದರೆ ಅವೆಲ್ಲವೂ ನಮಗೆ ಗೊತ್ತಾಗುವುದಿಲ್ಲ. ಕ್ರೈಸ್ತನಾಗಿದ್ದಕ್ಕೆ ಅಬ್ಬಬ್ಬಾ ಎಂದರೆ ನನಗೆ ಹಿಂದೂ ದೇವಸ್ಥಾನದೊಳಕ್ಕೆ ಹೋಗುವ ಅವಕಾಶ ಸಿಗುವುದಿಲ್ಲ. 'ಅವ್ಯವಸ್ಥೆ ಸಿದ್ಧಾಂತ' ಏನು ಹೇಳುತ್ತದೆಂದರೆ, ಒಂದು ಸಂಗತಿಯನ್ನು ಬದಲಾಯಿಸಿದರೂ ಎಲ್ಲವೂ ಬದಲಾಗಿ ಹೋಗುತ್ತದೆ ಅಂತ. ತಿಳಿಯಾದ ಕೊಳದಲ್ಲಿ ಕಲ್ಲು ಒಗೆದಂತೆ ಎಲ್ಲವೂ ತಲ್ಲಣಕ್ಕೆ ಒಳಗಾಗುತ್ತವೆ. ಆದರೆ ಆಗಿರುವುದನ್ನು ಬದಲಾಯಿಸುವುದು ಹೇಗೆ?

**◆ ನಿಮ್ಮ ಬೇರೆ ಬೇರೆ ಸಂದರ್ಶನಗಳನ್ನು ಕೇಳಿದ ಮೇಲೆ ನಿಮ್ಮ ಬಾಲ್ಯ ಕಠಿಣವಾಗಿತ್ತು ಎಂದು**